

13




14 ಅವರೆಲ್ಲರೂ ಶಿವನನ್ನು ಪ್ರಾರ್ಥಿಸಿದರು. ಶಿವ ಅವರ ಮುಂದೆ ಪ್ರತ್ಯಕ್ಷನಾದ.




15 ಕುಬೇರ, ಇಂದ್ರ ಹಾಗೂ ಋಷಿಪತ್ನಿ ಎಲ್ಲರೂ ಭಗವಾನ್ ಗಣೇಶನನ್ನು ಪ್ರಾರ್ಥಿಸಿದರು. ಗಣೇಶ ಅವರ ಮುಂದೆ ಕಾಣಿಸಿಕೊಂಡ.




16



ಭಗವಂತ ನಿಮ್ಮನ್ನು ಎಂದೆಂದಿಗೂ ಅನುಗ್ರಹಿಸಲಿ. ಪ್ರಪಂಚವೆಂಬ ಈ ಬಹುದೊಡ್ಡ ಬೂಟಾಟಿಕೆಯಿಂದ ಬಹುದೂರ ನಿಮ್ಮನ್ನು ಕರೆದೊಯ್ಯಲಿ! ಪ್ರಪಂಚವೆಂಬ ಮಾಯೆಗೆ ನೀವೆಂದಿಗೂ ಮರುಳಾಗದೆ ಇರುವಂತಾಗಲಿ. ಶಂಕರನು ನಿಮಗೆ ಸಹಾಯಕನಾಗಿರಲಿ. ಉಮೆಯು ನಿಮಗೆ ಸತ್ಯದ ಬಾಗಿಲನ್ನು ತೆರೆದು ನಿಮ್ಮೆಲ್ಲ ಭ್ರಮೆಗಳನ್ನೂ ನಿವಾರಿಸಲಿ.

**–ಸ್ವಾಮಿ ವಿವೇಕಾನಂದ**

# ಬೆಂಗಳೂರು ರಾಮಕೃಷ್ಣ ಮಠದಲ್ಲಿ ವಾರ್ಷಿಕೋತ್ಸವ ಮತ್ತು 'Voice of Vivekananda' ಮೊಬೈಲ್ ಆ್ಯಪ್‌ನ ಬಿಡುಗಡೆ

ಬೆಂಗಳೂರು ರಾಮಕೃಷ್ಣ ಮಠದಲ್ಲಿ ಶ್ರೀರಾಮಕೃಷ್ಣ, ಶ್ರೀಮಾತೆ ಶಾರದಾದೇವಿ ಹಾಗೂ ಸ್ವಾಮಿ ವಿವೇಕಾನಂದರ ಜಯಂತಿ ಆಚರಣೆಯ ಅಂಗವಾಗಿ ನಡೆದ ಸಾರ್ವಜನಿಕ ವಾರ್ಷಿಕೋತ್ಸವವು ಈ ಬಾರಿ ವಿವಿಧ ಉಪನ್ಯಾಸಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ನೆರವೇರಿತು. ಇದರ ಅಂಗವಾಗಿ ವಿಶೇಷ ರಿಯಾಯಿತಿಗಳೊಂದಿಗೆ ಪುಸ್ತಕ ಪ್ರದರ್ಶನ ಹಾಗೂ ಮಾರಾಟದ ವ್ಯವಸ್ಥೆ ಮಾಡಲಾಗಿದ್ದು, ಡಿಸೆಂಬರ್ ೨೫ ರಿಂದ ಜನವರಿ ೧೨ರ ವರೆಗೆ ಮಠದ ಪ್ರವೇಶದ್ವಾರದ ಬಳಿ ಈ ಪ್ರದರ್ಶನ ನಡೆಯಿತು. ಕಲ್ಕತ್ತೆಯ ದಕ್ಷಿಣೇಶ್ವರದ ಭವ್ಯವಾದ ಕಾಳೀಮಂದಿರದ ಪ್ರತಿಕೃತಿಯನ್ನು ಪುಸ್ತಕ ಪ್ರದರ್ಶನದ ಪ್ರವೇಶ ದ್ವಾರದಲ್ಲಿ ನಿಲ್ಲಿಸಲಾಗಿದ್ದು, ಮಧ್ಯದಲ್ಲಿ ಕಾಳೀ ವಿಗ್ರಹವನ್ನು ಸ್ಥಾಪನೆ ಮಾಡಿದ್ದು ಈ ಬಾರಿಯ ವಿಶೇಷ.

೨೦೧೫ರ ಜನವರಿ ೧ರಂದು ಕಲ್ಪತರು ದಿನಾಚರಣೆಯ ಸಂದರ್ಭದಲ್ಲಿ, ವಾರ್ಷಿಕೋತ್ಸವದ ಅಂಗವಾಗಿ 'Voice of Vivekananda' ಎಂಬ ಮೊಬೈಲ್ ಆ್ಯಪ್ ಅನ್ನು ಜೈನ್ ಗ್ರೂಪ್ ಸಂಸ್ಥೆಗಳ ಮುಖ್ಯಸ್ಥರಾದ ಡಾ. ಚೆನ್‌ರಾಜ್ ರಾಯ್‌ಚಂದ್ ಅವರು



ಬಿಡುಗಡೆ ಮಾಡಿದರು. ಶ್ರೀ ಸುಹಾಸ್ ಗೋಪಿನಾಥ್ ವಿಶೇಷ ಅತಿಥಿಯಾಗಿದ್ದರು. ಸ್ವಾಮಿ ವಿವೇಕಾನಂದರ ಸಂದೇಶ, ಚಿತ್ರಗಳು ಹಾಗೂ ವಿವಿಧ ವಿಷಯಗಳಿಗೆ ಸಂಬಂಧಿಸಿದ ಸ್ವಾಮೀಜಿ ನುಡಿಗಳ ವಾಚನವನ್ನು ಒಳಗೊಂಡ ಆ್ಯಪ್ ಅನ್ನು ಸದ್ಯ ಅಂಡ್ರಾಯ್ಡ್‌ಗಾಗಿ ತಯಾರಿಸಲಾಗಿದೆ. ಇದು ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಉಚಿತವಾಗಿ ಲಭ್ಯವಿದೆ. (ಉಚಿತವಾಗಿ ಪಡೆಯಲು ಲಿಂಕ್: http://market.android.com/details?id=com.rkblr.viveka) *

# ಬಳ್ಳಾರಿ ರಾಮಕೃಷ್ಣ ವಿವೇಕಾನಂದ ಕೇಂದ್ರದಲ್ಲಿ ಸ್ವರ್ಣ ಮಹೋತ್ಸವ




ಬಳ್ಳಾರಿ ಶ್ರೀರಾಮಕೃಷ್ಣ ವಿವೇಕಾನಂದ ಕೇಂದ್ರವು ತನ್ನ "**ಸ್ವರ್ಣ ಮಹೋತ್ಸವ**" ವನ್ನು ೨೦೧೪ರ ಡಿಸೆಂಬರ್ ೬, ೭ ಮತ್ತು ೮ ರಂದು ಆಚರಿಸಿತು. ಮೂರು ದಿನಗಳ ಈ ಸಮಾರಂಭವನ್ನು ನಗರದ 'ಬಸವ ಭವನ' ದಲ್ಲಿ ಆಯೋಜಿಸಲಾಗಿತ್ತು.

ದಿನಾಂಕ ೬ರಂದು ಕಾರ್ಯಕ್ರಮದ ಉದ್ಘಾಟನೆ ನಡೆಯಿತು. ದಿವ್ಯಸಾನ್ನಿಧ್ಯ ವಹಿಸಿದ ತುಮಕೂರು ಹಿರೇಮಠದ ಅಧ್ಯಕ್ಷರಾದ ಪೂಜ್ಯ ಶ್ರೀ ಷ.ಬ್ರ. ಡಾ.ಶಿವಾನಂದ ಶಿವಾಚಾರ್ಯ ಸ್ವಾಮಿಗಳು ಜ್ಯೋತಿ ಬೆಳಗುವ ಮೂಲಕ ಉದ್ಘಾಟನೆ ಯನ್ನು ನೆರವೇರಿಸಿ ಮಾತನಾಡಿದರು. ಸ್ವಾಮಿ ಮುಕ್ತಿದಾನಂದಜಿ ವಿಶೇಷ ಭಾಷಣ ಮಾಡಿದರು. ಅನಂತರ ನಡೆದ ಮೊದಲ '**ಯುವ ಸಮಾವೇಶ**'ದಲ್ಲಿ ಸ್ವಾಮಿ ವೀರೇಶಾನಂದ ಸರಸ್ವತಿ, ಡಾ. ವಿ.ಬಿ.ಆರತಿ ವಿಶೇಷ ಉಪನ್ಯಾಸ ನೀಡಿದರು. ಸ್ವಾಮಿ ಶಾಂತಿಮಯಾನಂದಜಿ ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು. ಸಂಜೆ ನಗರದಲ್ಲಿ ವರ್ಣಮಯವಾದ '**ಶೋಭಾಯಾತ್ರೆ**' ನಡೆಯಿತು. ಅನಂತರ ಶ್ರೀ ಚಕ್ರವರ್ತಿ ಸೂಲಿಬೆಲೆಯವರು '**ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿ ನವ ಭಾರತದ ನಿರ್ಮಾಣ**' ಎಂಬ ವಿಶೇಷ ಉಪನ್ಯಾಸ ನೀಡಿದರು. ಸಂಜೆ ೭ ರಿಂದ ಸ್ವಾಮಿ ವಿವೇಕಾನಂದರ ಸಂದೇಶವನ್ನು ಆಧರಿಸಿದ ನಾಟಕ "**ಕರೆಯುತಿದೆ ಯುಗವಾಣಿ**"ಯನ್ನು ಶ್ರೀ ಮಂಡ್ಯ ರಮೇಶ್ ಅವರ ನೇತೃತ್ವದಲ್ಲಿ **ನಟನ**, ಮೈಸೂರು – ಇವರು ಪ್ರಸ್ತುತಪಡಿಸಿದರು.

ದಿನಂಕ ೭ ರಂದು "**ಶಿಕ್ಷಕರ ಸಮಾವೇಶ**" ನಡೆಯಿತು. ಮೂರು ಅಧಿವೇಶನಗಳು ಹಾಗೂ ಶ್ರೀ ಗುರುರಾಜ ಕರಜಗಿಯವರ '**ಮಂಕುತಿಮ್ಮನ ಕಗ್ಗ**' – ವಿಶೇಷ ಉಪನ್ಯಾಸ, ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ '**ವಿವೇಕ ಸಂಗೀತ**' (ಬೆಂಗಳೂರಿನ ಶ್ರೀ ಪ್ರವೀಣ್ ಡಿ.ರಾವ್ ಹಾಗೂ ಸಂಗಡಿಗರಿಂದ) ನಡೆಯಿತು. ರಾಮಕೃಷ್ಣ ಮಹಾಸಂಘದ ಸಂನ್ಯಾಸಿಗಳು, ನಾಡಿನ ಪ್ರಸಿದ್ಧ ಚಿಂತಕರು ಅಧಿವೇಶನಗಳನ್ನು ನೆರವೇರಿಸಿಕೊಟ್ಟರು.

ದಿನಾಂಕ ೮ ರಂದು "**ಭಕ್ತ ಸಮಾವೇಶ**" ನಡೆಯಿತು. ಇದರ ಅಂಗವಾಗಿ ನಡೆದ ಮೂರು ಅಧಿವೇಶನಗಳಲ್ಲಿ 'ದಿವ್ಯತ್ರಯರ ಸಂದೇಶ', 'ಆಧ್ಯಾತ್ಮಿಕ ಪರಿವರ್ತನೆ', 'ಶ್ರೀಮಾತೆ ಶಾರದಾ ದೇವಿ'ಎಂಬ ವಿಷಯಗಳನ್ನು ಕುರಿತಂತೆ ವಿವಿಧ ಉಪನ್ಯಾಸಗಳು ನಡೆದವು. ಸಾಯಂಕಾಲ ನಡೆದ ಮುಕ್ತಾಯ ಸಮಾರಂಭದಲ್ಲಿ '**ನವಚೇತನ**' ಎಂಬ ಸ್ಮರಣಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು. ಸಭಾ ಕಾರ್ಯಕ್ರಮದಲ್ಲಿ ರಾಮಕೃಷ್ಣ ಮಠ ಮತ್ತು ಮಿಷನ್ನಿನ ಸಹಾಯಕ ಕಾರ್ಯದರ್ಶಿಗಳಾದ ಪೂಜ್ಯ ಸ್ವಾಮಿ ಬಲಭದ್ರಾನಂದಜಿ ಮಹಾರಾಜ್, ಸ್ವಾಮಿ ಹೃದಾನಂದಜಿ, ಸ್ವಾಮಿ ಮುಕ್ತಿದಾನಂದಜಿ ಭಾಗವಹಿಸಿದ್ದರು. ಬಳಿಕ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಶ್ರೀ ಇಬ್ರಾಹಿಂ ಸುತಾರ್ ಹಾಗೂ ಸಂಗಡಿಗರಿಂದ '**ಆಧ್ಯಾತ್ಮಿಕ ಸಂವಾದ ತರಂಗಿಣಿ**' ನಡೆಯಿತು. ಕಾರ್ಯಕ್ರಮದಲ್ಲಿ ಬಳ್ಳಾರಿ ರಾಮಕೃಷ್ಣ ವಿವೇಕಾನಂದ ಕೇಂದ್ರದಲ್ಲಿ ವಿಶೇಷ ಸೇವೆ ಸಲ್ಲಿಸಿದ ಗಣ್ಯರನ್ನು ಸನ್ಮಾನಿಸಲಾಯಿತು. *